
ಅಲ್ಲ, ಕುವೆಂಪು ಅವರ ನಾಟಕದ ವಸ್ತುವಿನಲ್ಲಿ ಜಾತೀಯ ಮನಸ್ಸು ಕೆಲಸ ಮಾಡಿದೆಯೆಂದು ತಮ್ಮ 'ಜೀವನ' ಪತ್ರಿಕೆಯಲ್ಲಿ ವಿಮರ್ಶೆ ಬರೆದ ಮಾಸ್ತಿಯವರಂತಹ ವಿಮರ್ಶಕರೂ ಅಲ್ಲ. ಅವರೊಬ್ಬ ರಾಜಕಾರಣಿ. ಅದೂ ಬರೀ ರಾಜಕಾರಣಿಯಲ್ಲ, 'ದಲಿತ ರಾಜಕಾರಣಿ.' ಅಂದಮೇಲೆ ಕೇಳಬೇಕೆ? ಎಲ್ಲಾದರೂ ಅವರಿಗೆ ಅಂತಹ ಅರ್ಹತೆಯಿರಲು ಸಾಧ್ಯವೇ? ಪಟೇಲರೋ, ಗೌಡರೋ, ಹೆಗಡೆಯವರೋ ಆಗಿದ್ದಲ್ಲಿ ಒಂದು ಪಕ್ಷ ಒಪ್ಪಬಹುದಿತ್ತೇನೋ. ಇರಲಿ, ಯಾರು ಆ ಮಹಾನುಭಾವರು? ಆ ಹೇಳಿಕೆ ಯಾಕೆ ಮಾಡಿದರು?

ಅವರು ಮತ್ತಾರೂ ಅಲ್ಲ, ಸ್ವಾತಂತ್ರ್ಯಾನಂತರ ಮೈಸೂರು ರಾಜ್ಯವಾಗಿದ್ದ ರಾಜ್ಯ 'ಕರ್ನಾಟಕ' ಎಂದು ಮರುನಾಮಕರಣಗೊಂಡಾಗ ಮುಖ್ಯಮಂತ್ರಿಯಾಗಿ, ಅಲ್ಪಸಂಖ್ಯಾತ, ಹಿಂದುಳಿದ ಹಾಗೂ ದಲಿತ (ಅಹಿಂದ) ರಾಜಕಾರಣಕ್ಕೆ ಮುನ್ನುಡಿ ಬರೆದ ಡಿ. ದೇವರಾಜ್ ಅರಸ್ ಅವರ ಸಂಪುಟದಲ್ಲಿ ಪೌರಾಡಳಿತ ಸಚಿವರಾಗಿದ್ದ ಬಿ. ಬಸವಲಿಂಗಪ್ಪನವರು. ಕರ್ನಾಟಕ ತನ್ನ ಮೊದಲನೇ ರಾಜ್ಯೋತ್ಸವ ಆಚರಿಸಿಕೊಂಡು ಕೆಲವೇ ವಾರಗಳಾಗಿದ್ದ ಸಂದರ್ಭವದು. ಆಗ 1973ನೇ ಇಸವಿಯ ನವೆಂಬರ್ 18ನೇ ತಾರೀಖಿನಂದು ಮೈಸೂರಿನಲ್ಲಿ 'ಅಂಬೇಡ್ಕರ್ ಸ್ಕೂಲ್ ಆಫ್ ಥಾಟ್ಸ್' (ಅಂಬೇಡ್ಕರ್ ವಿಚಾರಗಳ ವೇದಿಕೆ) ಎಂಬ ಸಂಸ್ಥೆ 'ನ್ಯೂ ವೇವ್ಸ್' (ಹೊಸ ಅಲೆಗಳು) ಎಂಬ ವಿಚಾರ ಸಂಕಿರಣವನ್ನು ಏರ್ಪಡಿಸಿತ್ತು. ಅಲ್ಲಿ ಉಪನ್ಯಾಸ ನೀಡಿದ ಅವರು,



"ಕನ್ನಡದಲ್ಲಿ ಇರುವುದೆಲ್ಲ ಗಟ್ಟಿಯಾದ ಸಾಹಿತ್ಯವೇನಲ್ಲ. ಅದರಲ್ಲೂ ಸಾಕಷ್ಟು ಬೂಸಾ ಸಾಹಿತ್ಯವಿದೆ" ಎಂದಿದ್ದು ರಾಜ್ಯದಲ್ಲಿ ದೊಡ್ಡ ಸಾಂಸ್ಕೃತಿಕ ಹಾಗೂ ರಾಜಕೀಯ ವಿಪ್ಲವವನ್ನೇ ಉಂಟುಮಾಡಿದ್ದು ಈಗ ಇತಿಹಾಸ. ಹಾಗೆ ಹೇಳುವುದಾರೆ, ಶ್ರೀಯವರು ತಮ್ಮ ಭಾಷಣದಲ್ಲಿ "ಸಾಹಿತ್ಯ ಬೆಳೆಯಬೇಕಾದರೆ ಬರಿಯ ಲಕ್ಷಣಗಳಿಗೆ, ಸೂತ್ರಗಳಿಗೆ, ಕಟ್ಟುಬಿದ್ದಿರಬೇಕಾದುದಿಲ್ಲ, ಸಾಹಿತ್ಯದಿಂದ ಲಕ್ಷಣ ಸೂತ್ರಗಳೇ ಹೊರತು ಲಕ್ಷಣ ಸೂತ್ರಗಳಿಂದ ಸಾಹಿತ್ಯವಲ್ಲ. ನಮಗೆ ಯಾವುದು ಹೊಂದಿಕೊಳ್ಳುತ್ತದೆಯೋ, ನಮ್ಮ ಜನರಿಗೆ ಯಾವುದರಿಂದ ತಿಳಿವಳಿಕೆಯನ್ನೂ, ಜ್ಞಾನವನ್ನೂ ಸಾಹಿತ್ಯವನ್ನೂ ಸುಲಭವಾಗಿ ಕೊಡಬಹುದೋ ಅಂತಹ ಲಕ್ಷಣ ಸೂತ್ರವಿದ್ದರೆ ಇರಲಿ, ಇಲ್ಲದಿದ್ದರೆ ಹೋಗಲಿ. ಇದು ಕನ್ನಡತನದ ಒಳಗುಟ್ಟು, ಒಳಗೆ ಕುಳಿತಿರುವ ಕೆಚ್ಚು. ಇದು ಈಗ ಇಂಗಿಶ್ ಸಾಹಿತ್ಯದ ಪ್ರಭಾವದಲ್ಲಿ

